# ಕರ್ನಾಟಕ ವಿಧಾನ ಪರಿಷತ್ತು

1. ಸದಸ್ಯರ ಹೆಸರು : ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
2. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1313
3. ಉತ್ತರಿಸಬೇಕಾದ ದಿನಾಂಕ : 24-12-2021
4. ಉತ್ತರಿಸುವವರು : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಅತಿ ಹೆಚ್ಚು ಮಾನವ ದಿನಗಳನ್ನು ಸೃಜಿಸಿದ ಮತ್ತು ಅತಿ ಹೆಚ್ಚು ವೆಚ್ಚ ಮಾಡಿದ ಜಿಲ್ಲೆಗಳು ಯಾವುವು; (ವರ್ಷವಾರು ಮತ್ತು ಜಿಲ್ಲಾವಾರು, ಮಾನವ ದಿನ ಮತ್ತು ವೆಚ್ಚವಾರು ಮಾಹಿತಿಯನ್ನು ನೀಡುವುದು) | **ಅನುಬಂಧ-1** ರಲ್ಲಿ ಲಗತ್ತಿಸಿದೆ |
| ಆ) | ಉಡುಪಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಅತಿ ಹೆಚ್ಚು ಮಾನವ ದಿನಗಳನ್ನು ಸೃಜಿಸಿದ ಮತ್ತು ಅತಿ ಹೆಚ್ಚು ವೆಚ್ಚ ಮಾಡಿದ ಗ್ರಾಮ ಪಂಚಾಯತಿಗಳು ಯಾವುವು; (ವರ್ಷವಾರು ಮತ್ತು ಗ್ರಾಮ ಪಂಚಾಯತಿವಾರು ಮಾಹಿತಿಯನ್ನು ನೀಡುವುದು) | **ಅನುಬಂಧ-2** ರಲ್ಲಿ ಲಗತ್ತಿಸಿದೆ |
| ಇ) | ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ 15 ದಿನಗಳಾದರೂ ಕೂಲಿ ಹಣ ಪಾವತಿಯಾಗದ ಪ್ರಕರಣ ಸಂಖ್ಯೆ ಎಷ್ಟು: ನಿಗದಿತ ಅವಧಿಯಲ್ಲಿ ಗ್ರಾಮ ಪಂಚಾಯತಿಗಳು ಹಾಜರಾತಿ ಮತ್ತು ಅಳತೆ ಪುಸ್ತಕವನ್ನು ದಾಖಲಿಸಿ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿದರೂ ಕೂಲಿ ಹಣ ಪಾವತಿಯಾಗದಿರುವ ಪ್ರಕರಣಗಳೆಷ್ಟು; ಪಾವತಿಸಬೇಕಾದ ಕೂಲಿ ಮೊತ್ತವೆಷ್ಟು; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು ಕಾಯದೆಯನುಸಾರ ಈ ಕೂಲಿಯಾಳುಗಳಿಗೆ 15 ದಿನಗಳಾದರೂ ಕೂಲಿ ಹಣ ಪಾವತಿಯಾಗದ ಕಾರಣ ಪಾವತಿಸಬೇಕಾದ ಭತ್ಯೆ ಎಷ್ಟು; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು) | **ಅನುಬಂಧ-3** ರಲ್ಲಿ ಲಗತ್ತಿಸಿದೆ |
| ಈ) | ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಯಾವ ಯಾವ ಲೆಕ್ಕ ಪರಿಶೋಧನೆಯನ್ನು ಮಾಡಲಾಗುತ್ತಿದೆ; ಒಂದೇ ಕಾಮಗಾರಿಯನ್ನು ಅನೇಕ ವಿಧದಲ್ಲಿ ಲೆಕ್ಕಪರಿಶೋಧನೆಯನ್ನು | ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ-2005 ಪ್ರಕರಣ-17 ರಂತೆ ನರೇಗಾ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳ ಸಾಮಾಜಿಕ ಪರಿಶೋಧನೆ ನಡೆಸಲಾಗುತ್ತದೆ. |

| | | |
|---|---|---|
| | ಮಾಡುವ ಉದ್ದೇಶವೇನು; ಸಾಮಾಜಿಕ ಪರಿಶೋಧಕರು ಗ್ರಾಮ ಸಭಾ ನಡವಳಿಯಲ್ಲಿ ತಮ್ಮ ಅಭಿಪ್ರಾಯವನ್ನು ಗ್ರಾಮಸಭಾ ನಿರ್ಣಯದಂತೆ ದಾಖಲಿಸುತ್ತಿರುವುದನ್ನು ಗಮನಿಸಿಲಾಗಿದೆಯೇ; ಈ ವಸೂಲಾತಿ ಮತ್ತು ಆಕ್ಷೇಪಣೆಯನ್ನು ಸ್ಥಳೀಯ ಲೆಕ್ಕಪತ್ರ ವರ್ತುಲದ ಲೆಕ್ಕ ಪರಿಶೋಧಕರಿಂದ ದೃಢೀಕರಿಸಿ ಸ್ವೀಕರಿಸುವ ಬಗ್ಗೆ ಸರ್ಕಾರದ ಕ್ರಮವೇನು? | ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನೇಮಿಸುವ ನರೇಗಾ ಯೋಜನೆಯ ಅನುಷ್ಠಾನೇತರ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸುವ ಗ್ರಾಮ ಸಭೆಯಲ್ಲಿ ವರದಿಗಳನ್ನು ಮಾರ್ಗಸೂಚಿಯಂತೆ ಚರ್ಚಿಸಿ ತೀರ್ಮಾನಿಸಿದಂತೆ ಆಕ್ಷೇಪಣೆ/ವಸೂಲಾತಿ ವರದಿಗಳನ್ನು ತಯಾರಿಸಲಾಗುತ್ತದೆ. ಸಾಮಾಜಿಕ ಪರಿಶೋಧಕರು ತಮ್ಮ ಅಭಿಪ್ರಾಯವನ್ನಯ ಗ್ರಾಮ ಸಭೆಯ ಅಭಿಪ್ರಾಯದಂತೆ ದಾಖಲಿಸಲು ಅವಕಾಶವಿರುದಿಲ್ಲ.<br><br>ಸಾಮಾಜಿಕ ಪರಿಶೋಧನಾ ವರದಿಯ ವಸೂಲಾತಿ ಮತ್ತು ಆಕ್ಷೇಪಣೆಯನ್ನು ಸ್ಥಳೀಯ ಲೆಕ್ಕಪತ್ರ ವರ್ತುಲದ ಲೆಕ್ಕ ಪರಿಶೋಧಕರಿಂದ ದೃಡೀಕರಿಸಲು ಮಾರ್ಗಸೂಚಿಯಲ್ಲಿ ಅವಕಾಶವಿರುವುದಿಲ್ಲ. |

ಗ್ರಾಅಪ 82(34) ಉಖಾಯೋ 2021

**(ಕೆ.ಎಸ್.ಈಶ್ವರಪ್ಪ)**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ